**ಅಸಲು ದಾವ ಸಂಖ್ಯೆಃ 327/2026**
**ಪಿ.ಡಬ್ಲೂ -1**

**ದಿಃ 20-07-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಮಾನ್ಯ ಡಿಜಿಪಿ ರವರಿಂದಃ-**

1. ಸಿದ್ರಾಯಿ ರುಕಮನ್ನ ಪಾಟೀಲ ಎಂದರೆ ನನ್ನ ತಂದೆ. ನನ್ನ ತಂದೆ ಸಿದ್ರಾಯಿ ರವರು ದಿಃ 18-07-1998 ರಂದು ಮರಣಹೊಂದಿರುತ್ತಾರೆ. ನನ್ನ ತಂದೆ ಗೌಂಡವಾಡದಲ್ಲಿ ವಾಸವಿರುತ್ತಿದ್ದರು. ನನ್ನ ತಾಯಿಯ ಹೆಸರು ಇಂದುಬಾಯಿ ಸಿದ್ರಾಯಿ ಪಾಟೀಲ, ಅವರೂ ಸಹ ಮರಣಹೊಂದಿರುತ್ತಾರೆ. ನನ್ನ ತಂದೆ ತಾಯಿ ಮರಣಹೊಂದಿದ ನಂತರ ಅವರ ವಾರಸಾ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ. ಅವರ ವಾರಸಾ ಪ್ರಮಾಣ ಪತ್ರ ಪಡೆದಿದ್ದರೆ ಅವರಿಗೆ ಮಕ್ಕಳು ಎಷ್ಟು ಜನ ಎಂದು ತಿಳಿದು ಬರುತ್ತದೆ ಎಂಬ ಕಾರಣಕ್ಕೆ ಅವರ ವಾರಸಾ ಪ್ರಮಾಣ ಪತ್ರ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ಹೆಸರು ದೀಪಾ ಮೋಹನ ಕಿತ್ತೂರಕರ. ಯಮೂ ಸಿದ್ರಾಯಿ ಪಾಟೀಲ ಎಂದರೆ ನಾನೇ ಆಗಿರುತ್ತೇನೆ. ಸಿದ್ರಾಯಿ ರವರಿಗೆ ಇಬ್ಬರೇ ಮಕ್ಕಳು. ಅವರ ಹೆಸರು ದೇವಪ್ಪಾ ಸಿದ್ರಾಯಿ ಪಾಟೀಲ ಹಾಗೂ ಯಮೂ ಸಿದ್ರಾಯಿ ಪಾಟೀಲ ಎಂದರೆ ನಾನು. ದೇವಪ್ಪ ರವರು ದಿಃ 06-02-2023 ರಂದು ಮರಣಹೊಂದಿರುತ್ತಾರೆ. ದೇವಪ್ಪ ರವರಿಗೆ ಮದುವೆಯಾಗಿರಲಿಲ್ಲ. ದೇವಪ್ಪ ರವರು ಹೆಚ್ಚು ಮದ್ಯಪಾನ ಮಾಡುತ್ತಿದ್ದ ಕಾರಣ ಅವರಿಗೆ ಮದುವೆ ಮಾಡಿರಲಿಲ್ಲ. ನನಗೆ ಹಾಗೂ ದೇವಪ್ಪ ರವರಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ದೇವಪ್ಪ ರವರ ಹೆಸರಿಗೆ ಇರುವ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ದೇವಪ್ಪ ರವರ ನಡುವೆ ಸಂಬಂಧ ಇದೆ ಎಂದು ತೋರಿಸಲು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**